ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

# Karnataka State Road Transport Corporation
## Recruitment Section (ನೇಮಕ ಶಾಖೆ)

ಸಂಖ್ಯೆ:ಕರಾಸಾ/ಕೇಕ/ನೇಮಕ/ಸಿ-2/753 /18-19 ದಿನಾಂಕ:20-09-2018

**ಪತ್ರಿಕಾ ಪ್ರಕಟಣೆ**

ವಿಷಯ : ಜಾಹೀರಾತು ಸಂ. 1/2016 ಮತ್ತು 2/2016 ರಡಿ ಕರೆಯಲಾದ ಮೇಲ್ವಿಚಾರಕೇತರ ಹುದ್ದೆಗಳಿಗೆ ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ನಡೆಸುತ್ತಿರುವ ಬಗ್ಗೆ.

*****

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಮೇಲಿನ ಜಾಹೀರಾತಿನಲ್ಲಿ ಮೇಲ್ವಿಚಾರಕೇತರ ವರ್ಗದ ವಿವಿಧ ವೃಂದಗಳ ಒಟ್ಟು 1116 ಹುದ್ದೆಗಳಿಗೆ ಮೆರಿಟ್ ಆಧಾರದ ಮೇಲೆ ನೇರ ನೇಮಕಾತಿಗಾಗಿ ಆನ್-ಲೈನ್ ಮೂಲಕ ಅರ್ಜಿಯನ್ನು ಸ್ವೀಕರಿಸಲಾಗಿತ್ತು. ಸದರಿ ಜಾಹೀರಾತಿಗೆ ಸ್ಪಂದಿಸಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ದಿನಾಂಕ 06.10.2018ರ ಪೂರ್ವಾಹ್ನದಂದು ತಾಂತ್ರಿಕ ಸಹಾಯಕ ಹುದ್ದೆಗೆ ಮತ್ತು ಅಪರಾಹ್ನದಂದು ಸಹಾಯಕ ಲೆಕ್ಕಿಗ, ಅಂಕಿ-ಅಂಶ ಸಹಾಯಕ ಹುದ್ದೆಗಳಿಗೆ ಹಾಗೂ ದಿನಾಂಕ 07.10.2018ರ ಪೂರ್ವಾಹ್ನದಂದು ಸಹಾಯಕ ಸಂಚಾರ ನಿರೀಕ್ಷಕ ಹುದ್ದೆಗೆ ಮತ್ತು ಅಪರಾಹ್ನದಂದು ಸಹಾಯಕ ಉಗ್ರಾಣ ರಕ್ಷಕ, ಕುಶಲಕರ್ಮಿ ಹುದ್ದೆಗಳಿಗೆ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

ಸದರಿ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆಯುವುದು ಹಾಗೂ ಇ-ಪ್ರವೇಶ ಪತ್ರವನ್ನು ದಿನಾಂಕ: 22-9-2018 ರಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಅಭ್ಯರ್ಥಿಗಳು ತಪ್ಪದೇ ಇ-ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ಪರೀಕ್ಷೆಗೆ ಹಾಜರಾಗುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್-ಸೈಟ್ ಆದ www.ksrtcjobs.com ಅನ್ನು ವೀಕ್ಷಿಸುವುದು.

ನಿರ್ದೇಶಕರು (ಸಿಬ್ಬಂದಿ ಮತ್ತು ಪರಿಸರ)

Scanned by CamScanner

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

# Karnataka State Road Transport Corporation

ADMINISTRASION DEPARTMENT (ಆಡಳಿತ ಇಲಾಖೆ)

## Recruitment Section (**ನೇಮಕ ಶಾಖೆ**)

ಸಂಖ್ಯೆ:ಕರಾಸಾ/ಕೇಕ/ನೇಮಕ/ಸಿ-2/ 753 /18-19 ದಿನಾಂಕ20-09-2018.

ಸಾರ್ವಜನಿಕ ಸಂಪರ್ಕಾಧಿಕಾರಿ,
ಕ.ರಾ.ರ.ಸಾ ನಿಗಮ,
ಕೇಂದ್ರ ಕಚೇರಿ,
ಬೆಂಗಳೂರು.

ವಿಷಯ: ಪತ್ರಿಕೆಗಳಲ್ಲಿ ಪ್ರಕಟಣೆ ನೀಡುವ ಬಗ್ಗೆ.

ಉಲ್ಲೇಖ: ಜಾಹೀರಾತು ಸಂಖ್ಯೆ. 1/2016 & 2/2016 ದಿನಾಂಕ:6-1-2016.

---------

ಉಲ್ಲೇಖಿತ ಜಾಹೀರಾತಿನ್ವಯ ಮೇಲ್ವಿಚಾರಕೇತರ ವರ್ಗದ ವಿವಿಧ ವೃಂದಗಳ ಒಟ್ಟು 1116 ಹುದ್ದೆಗಳಗೆ ನೇರ ನೇಮಕಾತಿಗಾಗಿ ಆನ್-ಲೈನ್ ಮೂಲಕ ಅರ್ಜಿಯನ್ನು ಸ್ವೀಕರಿಸಲಾಗಿತ್ತು. ಸದರಿ ಜಾಹೀರಾತಿಗೆ ಸ್ಪಂದಿಸಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಗೆ ದಿನಾಂಕ 6-10-2018 ಮತ್ತು ದಿನಾಂಕ 7-10-2018 ರಂದು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

ಸದರಿ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಗೆ ಕರೆಪತ್ರ ಡೌನ್‌ಲೋಡ್ ವ್ಯವಸ್ಥೆಯನ್ನು ದಿನಾಂಕ 22-09-2018 ರಿಂದ ಪ್ರಾರಂಭಿಸಲಾಗುತ್ತಿದ್ದು, ಸದರಿ ವಿಷಯವನ್ನು ಅಭ್ಯರ್ಥಿಗಳ ಹಾಗೂ ಸಾರ್ವಜನಿಕರ ಗಮನಕ್ಕೆ ತರಲು ಹೆಚ್ಚು ಪ್ರಚಾರದಲ್ಲಿರುವ ದಿನ ಪತ್ರಿಕೆಗಳಾದ ಪ್ರಜಾವಾಣಿ, ವಿಜಯ ಕರ್ನಾಟಕ, ಡೆಕ್ಕನ್ ಹೆರಾಲ್ಡ್, ಮತ್ತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗಳಲ್ಲಿ ದಿನಾಂಕ:22-09-2018 ರಂದು ರಾಜ್ಯಾದ್ಯಂತ ಪತ್ರಿಕಾ ಪ್ರಕಟಣೆಯಾಗಿ ಈ ಪತ್ರದೊಂದಿಗೆ ಲಗತ್ತಿಸಿರುವ ಪ್ರಕಟಣೆಯನ್ನು ಪ್ರಕಟಗೊಳಸಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಕೋರಲಾಗಿದೆ.

ಅಡಕ: ಮೇಲಿನಂತೆ

ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ)

Scanned by CamScanner